ಮನೆ ಕಟ್ಟಿದ ನಂತರ ನಿರ್ಮಿಸಿದ್ದರಿಂದ ಹೀಗಾಗಿರಬಹುದು. ಪಾಪುಟ್ಟಿಯ ಹೆಸರನ್ನು ಎಲ್ಲೋ ಕೇಳಿದಂತಿತ್ತು. ನನ್ನಲ್ಲಿದ್ದ ತಂತ್ರಾಂಶ 'ಪೂರ್ವಾಪರ'ವನ್ನು ಜಾಲಾಡಿದಾಗ, ಕೆಲ ವರ್ಷಗಳ ಹಿಂದಿನ ಪತ್ರಿಕಾ ವರದಿ ದೊರಕಿತು. ಈ ಮನೆಯಲ್ಲಿ ಹೆಣ್ಣುಗಳ ಅನೈತಿಕ ದಂಧೆ ನಡೆಯುತ್ತಿದೆಯೆಂದು ಪೊಲೀಸರಿಗೆ ಅನುಮಾನವಿತ್ತು. ಆದರೆ ಮೂರ್ನಾಲ್ಕು ಬಾರಿ ಹಠಾತ್ ದಾಳಿ ಮಾಡಿದಾಗಲೂ, ಯಾರೂ ಸಿಗದೇ ಪೊಲೀಸರು ಬರಿಗೈನಲ್ಲಿ ವಾಪಸಾಗಿದ್ದಾರೆಂದೂ, ಈ ಸಂಬಂಧ ಮಾಲೀಕ ಪಾಪುಟ್ಟಿಯನ್ನು ವಿಚಾರಿಸಿದ್ದರೆಂದೂ, ಆದರೆ ಆತ ಅದನ್ನು ನಿರಾಕರಿಸಿದ್ದನೆಂದು ವರದಿಯಾಗಿತ್ತು. ಹಾಗಾಗಿ, ನನಗೆ ಇಲ್ಲಿ ನೆಲಮಾಳಿಗೆಯೊಂದು ಇರಬಹುದೆಂದು ತರ್ಕಿಸಿದ್ದೆ. ಪೊಲೀಸರು ಬರುವಾಗ ಹೆಣ್ಣುಗಳು ಆ ನೆಲಮಾಳಿಗೆಯೊಳಗೆ ಅವಿತುಕೊಳ್ಳುತ್ತಿರಬೇಕೆಂದು ಊಹಿಸಿದ್ದೆ. ಅದಕ್ಕೇ ರಾತ್ರಿ ಬಂದು, ಬೀಗ ಮುರಿದು ತಲಾಶು ಮಾಡಿದೆ. ಪಾಪುಟ್ಟಿ, ನೀನು ಯಾವಾಗಲೂ ಸಣ್ಣ ಮೊತ್ತದ ನಗದು ಕದಿಯುತ್ತಿದ್ದೆ, ಕದ್ದಿದ್ದು ಪಕ್ಕನೆ ಗೊತ್ತಾಗಬಾರದು ಅನ್ನುವ ಉದ್ದೇಶದಿಂದ. ಸರಿ ತಾನೇ? ಈ ಸಲ ಯಾಕೆ ಪರ್ಸು ಕದ್ದೆ?"

"ಹೂಂ. ಸಣ್ಣ ಮೊತ್ತ ಕದ್ದರೆ ಯಾರಿಗೂ ಗೊತ್ತಾಗದು ಅಂತ ಭಾವಿಸಿದ್ದೆ... ಆದ್ರೆ... ಮೊನ್ನೆ... ಹಣ ಕಪಾಟಿನಲ್ಲಿ ಪಕ್ಕನೆ ಸಿಗಲಿಲ್ಲ. ಸ್ವಲ್ಪ ಹುಡುಕಾಟ ಮಾಡಿದ ಮೇಲೆ ಪರ್ಸು ಸಿಕ್ಕು. ಅಷ್ಟು ಹೊತ್ತಿಗೆ ಮಲಗುವ ಕೊಠಡಿಯಿಂದ ಕೆಮ್ಮಿನ ಸದ್ದು ಕೇಳ್ತು. ಬೋಪಣ್ಣ ಎದ್ದಿದ್ದಾನೆ ಅಂತ ಗೊತ್ತಾಯ್ತು. ಗಡಿಬಿಡಿಯಲ್ಲಿ ಪರ್ಸು ಎಳೆದೆ. ಯಾವುದೋ ಗಾಜಿನ ವಸ್ತುವೊಂದು ಒಡೆದಂತಾಯಿತು. ಕೈ ಮೇಲೆ ಯಾವುದೋ ದ್ರವ ಬಿದ್ದಂತಾಯಿತು. ತಕ್ಷಣ ಅಲ್ಲಿಂದ ಕಾಲುಕಿತ್ತೆ. ಅಷ್ಟರಲ್ಲಿ ಬೋಪಣ್ಣ ಮಲಗುವ ಕೋಣೆಯಿಂದ ಹೊರಬಂದಿದ್ದು ಕತ್ತಲಲ್ಲಿ ಮಸುಕಾಗಿ ಕಾಣಿಸಿತು. ಅದಿಕ್ಕೇ ಆ ಕೋಣೆಯ ಬಾಗಿಲಿನ ಎದುರು ಪ್ರತಿಮೆಯಂತೆ ಉಸಿರು ಬಿಗಿ ಹಿಡಿದು ನಿಂತೆ. ಬೋಪಣ್ಣ ಟಾಯ್ಲೆಟಿನೊಳಕ್ಕೆ ಹೋದೊಡನೆ ನಾನು ಬಾಗಿಲು ತೆಗೆದು ಒಳ ಸೇರಿದೆ."

ಕಾಳಪ್ಪ ಪಾಪುಟ್ಟಿಯನ್ನು ಕರೆದುಕೊಂಡು ಪೊಲೀಸ್ ಠಾಣೆಗೆ ಹೋದ. ನಾವು ಹಿಂದಿರುಗುವಾಗ ಕರಮಚಂದ ನನ್ನ ಅನುಮಾನವೊಂದಕ್ಕೆ ಸ್ಪಷ್ಟೀಕರಣ ನೀಡಿದ,

"ಹಣ ಕದಿಯುತ್ತಾ ಇದ್ದಿದ್ದು ಪಾಪುಟ್ಟಿಯೇ ಅಥವಾ ಆತನ ಕೆಲಸಗಾರರಲ್ಲಿ ಯಾರೊಬ್ಬನೋ ಎನ್ನುವುದು ಸ್ಪಷ್ಟವಾಗಿರಲಿಲ್ಲ. ಅದಿಕ್ಕೇ ಬೀಗವನ್ನು ಆತನ ಮನೆಯೆದುರು ಇರಿಸಿದೆ. ಪಾಪುಟ್ಟಿಯೇ ಆಗಿದ್ದರೆ ತಕ್ಷಣ ಆತ ಧಾವಿಸಿ ಬರುತ್ತಾನೆಂದು ಊಹಿಸಿದ್ದೆ. ಪುಷ್ಪಾ ಲಕ್ಷ್ಮೀ ಜ್ಯೂವೆಲ್ಲರಿಯಲ್ಲಿ ಚಿನ್ನ ಖರೀದಿಸಿದ್ದಳು. ಗಂಡನಿಗೆ ಗೊತ್ತಾಗಬಾರದೆಂದು ತನ್ನ ಉಳಿತಾಯದಿಂದ ಅದನ್ನು ಪಾವತಿಸುತ್ತಿದ್ದಳು, ಅಷ್ಟೇ!"

## ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ತೆದಾರಿ ಕಿರುಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ವಿವಿಧ ಪತ್ರಿಕೆಗಳಲ್ಲಿ ಕತೆ–ನೀಳ್ಗತೆಗಳೂ ಪ್ರಕಟಗೊಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.